**ಸಾಕ್ಷಿಗೆ ದಿನಾಂಕ 09-12-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ ಎಸ್.ಎಂ.ಎಂ./ವಿ.ಸಿ.ಎಂ.ಪಿ. 2ನೇ ಎದುರುದಾರರ ಪರ ವಕೀಲರಿಂದ</u>**

ಜೇವರ್ಗಿ ಠಾಣಾ 96/2021 ರಲ್ಲಿ ಒಂದೇ ವಾಹನ ಒಳಗೊಂಡಿತ್ತು. ಅಪಘಾತವಾಗಿ ಎಷ್ಟು ದಿನಗಳ ನಂತರ ದೂರು ದಾಖಲಿಸಿರುತ್ತಾರೆಂದರೆ ಸಾಕ್ಷಿ 9 ದಿನ ಗಳ ನಂತರ ದಾಖಲಿಸಿರುತ್ತಾರೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 28-04-2021 ರಂದು ಅಪಘಾತವಾಗಿದ್ದು ದೂರನ್ನು 07-05-2021 ರಂದು ನೀಡಿರುತ್ತಾರೆಂದು ನುಡಿಯುತ್ತಾರೆ. ಅಪಘಾತವಾದ ಎಷ್ಟು ದಿನಗಳ ನಂತರ ಜಪ್ತಿ ಮಾಡಿದ್ದೀರಾ ಎಂದರೆ ಸಾಕ್ಷಿ ವಾಹನವನ್ನು 08-05-2021 ರಂದು ವಶಕ್ಕೆ ಪಡೆದಿರುತ್ತೇನೆಂದು ನುಡಿಯುತ್ತಾರೆ. ಲಾರಿ ನಂ.MP-06 HC-1382 ರ ವಾಹನದಿಂದ ಯಾವುದೇ ಅಪಘಾತ ಸಂಭವಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನದ ಮೇಲೆ ಸುಳ್ಳು ಪ್ರಕರಣದಲ್ಲಿ ದಾಖಲಿಸಿ ಸರಿಯಾಗಿ ತನಿಖೆ ಮಾಡದೇ ಸುಳ್ಳು ದೋಷಾರೋಪ ಪಟ್ಟಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಶ್ರೀ ಕೆ.ಇ.ಬಿ. 1ನೇ ಎದುರುದಾರರ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ತಿಳಿಸಿರುತ್ತಾರೆ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,ಜೇವರ್ಗಿ